ADFACTORS PR
Knowledge-driven communications

| | | | |
|---|---|---|---|
| Published Date: | 18 Jul 2018 | Publication: | Sanjevani (Kannada) |
| Edition: | Bangalore | Page No: | 2 |
| MAV/CCM: | 24070/24.07 | Circulation: | 100000 |

# ಶಾಲೆ ವಿದ್ಯಾರ್ಥಿಗಳಿಗಾಗಿ ಟೆಕ್ ಕ್ವಿಜ್

ಬೆಂಗಳೂರು, ಜು 18– ಟಾಟಾ ಕನ್ಸಲ್ಟೆಂಟ್ಸಿ ಸರ್ವೀಸಸ್ (ಟಿಸಿಎಸ್) ಪ್ರಮುಖ ಐ.ಟಿ ಸೇವಾ, ಸಮಾಲೋಚನೆ ಮತ್ತು ಉದ್ಯಮ ಪರಿಹಾರಕ್ರಮ ಒದಗಿಸುವ ಸಂಸ್ಥೆ. ಇಂದು ಭಾರತದ ಅತಿದೊಡ್ಡ ಟೆಕ್ನಾಲಜಿ ಕ್ವಿಜ್ ಕಾರ್ಯಕ್ರಮ 'ಟಿಸಿಎ ಐಟಿ ವಿಜ್ 2018'ನ ಬೆಂಗಳೂರು ಆವೃತ್ತಿಯ ವಿವರಗಳನ್ನು ಪ್ರಕಟಿಸಿದೆ. ದೇಶದ ಅತಿದೊಡ್ಡ ಟೆಕ್ನಾಲಜಿ ಕ್ವಿಜ್ ಆಗಸ್ಟ್ 7ರಂದು ವಯ್ಯಾಲಿಕಾವಲ್‌ನಲ್ಲಿ ಇರುವ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ. 8–12ರಿಂದ ತರಗತಿವರೆಗಿನ ವಿದ್ಯಾರ್ಥಿಗಳಿಗೆ (ಪದವಿಪೂರ್ವ ಅಥವಾ ಕಿರಿಯ ಕಾಲೇಜು ವಿದ್ಯಾರ್ಥಿಗಳು ಸೇರಿ) ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರು. ಪ್ರತಿ ಸಂಸ್ಥೆಯು ತಲಾ 10 ತಂಡಗಳನ್ನು (ಪ್ರತಿ ತಂಡಕ್ಕೆ ಇಬ್ಬರು ಸದಸ್ಯರು) ಕಳುಹಿಸಬಹುದು. ಪ್ರವೇಶ ಶುಲ್ಕ ಇರುವುದಿಲ್ಲ. ಟಿಸಿಎಸ್ ಐಟಿ ವಿಜ್ 2018 12 ಸ್ಥಳಗಳಲ್ಲಿ ನಡೆಯಲಿದೆ. ಅವುಗಳು ಅಹಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ದೆಹಲಿ, ಹೈದರಾಬಾದ್, ಇಂದೋರ್, ಕೊಚ್ಚಿ, ಕೋಲ್ಕೊತ್ತಾ, ಮುಂಬೈ, ನಾಗಪುರ, ಪುಣೆ. ಪ್ರವೇಶಗಳನ್ನು ಆಯಾ ಸಂಸ್ಥೆಗಳ ಮೂಲಕ ಮಂಗಳವಾರ, ಜುಲೈ 31ರಒಳಗೆ, 'ಕ್ವಿಜ್ ಸಂಯೋಜಕರು, ಟಿಸಿಎಸ್ ಐಟಿ ವಿಜ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್‌ಜೆಎಂ ಟವರ್, #18, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು ? 560 009, ಭಾರತ' ಇಲ್ಲಿಗೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಳಿಗೆ ದೂರವಾಣಿ ಸಂಖ್ಯೆ 080–67246000.ಆನ್‌ಲೈನ್ ಮೂಲಕನೋಂದಣಿಗಾಗಿ www.tcsitwiz.com.

1/1